1	2	3	4
29	ಬೆಂಗಳೂರು (ಗ್ರಾಮಾಂತರ)		
1.	ತಾ.ಆ. ದೇವನಹಳ್ಳಿ	ತೃಪ್ತಿ ಎಂಟರ್‌ಪ್ರೈಸಸ್, 3ನೇ ಮಹಡಿ, 1ನೇ ಮುಖ್ಯ ರಸ್ತೆ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು	2,88,120 (2008–09)
2.	ತಾ.ಆ. ದೊಡ್ಡಬಳ್ಳಾಪುರ	ತೃಪ್ತಿ ಎಂಟರ್‌ಪ್ರೈಸಸ್, 3ನೇ ಮಹಡಿ, 1ನೇ ಮುಖ್ಯ ರಸ್ತೆ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು	4,93,920 (2008–09)
3.	ತಾ.ಆ. ನೆಲಮಂಗಲ	ಬಾಲಾಜಿ ಕ್ಲೀನಿಂಗ್ ಅಂಡ್ ಟ್ರಾನ್ಸ್ ಪೋರ್ಟ್ ಅಸೋಸಿಯೇಟ್ಸ್, ನಾಗರಬಾವಿ, ಬೆಂಗಳೂರು	4,93,440 (2008–09)
4.	ತಾ.ಆ. ಹೊಸಕೋಟೆ	ಬಾಲಾಜಿ ಕ್ಲೀನಿಂಗ್ ಅಂಡ್ ಟ್ರಾನ್ಸ್ ಪೋರ್ಟ್ ಅಸೋಸಿಯೇಟ್ಸ್, ನಾಗರಬಾವಿ, ಬೆಂಗಳೂರು	2,87,400 (2008–09)

ಹಾಸನ ಜಿಲ್ಲೆಯಲ್ಲಿ ಪ್ರಾಥಮಿಕ ಕೇಂದ್ರಗಳು

1084 ಶ್ರೀ ಎ. ಮಂಜು (ಅರಕಲಗೂಡು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು; ತಾಲ್ಲೂಕುವಾರು ಮಾಹಿತಿ ನೀಡುವುದು;

ಆ) ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯಕತೆಗನುಗುಣವಾಗಿ ವೈದ್ಯರಿರುತ್ತಾರೆಯೇ;

ಇ) ಯಾವ ಯಾವ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಹಾಸನ ಜಿಲ್ಲೆಯಲ್ಲಿ 121 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದೆ. ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಒಟ್ಟು ಪ್ರಾ.ಆ. ಕೇಂದ್ರಗಳು
1	**2**	**3**
1.	ಹಾಸನ	18
2.	ಹೊಳೆನರಸೀಪುರ	16
3.	ಸಕಲೇಶಪುರ	16
4.	ಬೇಲೂರು	9
5.	ಅರಕಲಗೂಡು	13
6.	ಚೆನ್ನರಾಯಪಟ್ಟಣ	24
7.	ಅರಸೀಕೆರೆ	20
8.	ಆಲೂರು	5
	ಒಟ್ಟು	**121**

ಆ) ಹಾಸನ ಜಿಲ್ಲೆಯಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 116 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 84 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 32 ವೈದ್ಯರ ಹುದ್ದೆಗಳು ಖಾಲಿ ಇವೆ.

ಇ) ಮಾರ್ಗಸೂಚಿ ಪ್ರಕಾರ ಹಾಸನ ಜಿಲ್ಲೆಯಲ್ಲಿ 12 ಸಮುದಾಯ ಆರೋಗ್ಯ ಕೇಂದ್ರಗಳು ಮಂಜೂರು ಮಾಡಬೇಕಾಗಿದ್ದು, ಹಾಲಿ 22 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಆದ್ದರಿಂದ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಅವಕಾಶವಿರುವುದಿಲ್ಲ.

ಶ್ರೀ ಸುನಿಲ್ ಎ. ಹೆಗಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ನಾವು ಕೇಳಿದ್ದೇನೆಂದರೆ, ಈ ಏಜೆನ್ಸಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರ ಅನುಸರಿಸುವ ಮಾನದಂಡವೇನು ಎಂದು ಕೇಳಿದ್ದೇವೆ. ಆದರೆ ಸಚಿವರು ಯಾವ ರೀತಿಯಿಂದ ಯಾವ ಆಸ್ಪತ್ರೆಯನ್ನು ನಾವು ಇದಕ್ಕೆ ಒಳಪಡಿಸುತ್ತೇವೆ ಎಂಬುದಕ್ಕೆ ಮಾನದಂಡವನ್ನು ಕೊಟ್ಟಿದ್ದಾರೆಯೇ ವಿನಃ ಆದರೆ ಆ ಏಜೆನ್ಸಿಗಳನ್ನು ಫಿಕ್ಸ್ ಮಾಡುವುದಕ್ಕೆ ಆ ಏಜೆನ್ಸಿಯವರಿಗೆ ಯಾವ ರೀತಿಯ ಮಾನದಂಡಗಳನ್ನು ಹಾಕುತ್ತಾರೆ ಎನ್ನುವಂಥ ಮಾಹಿತಿಯನ್ನು ತಿಳಿಸಿಲ್ಲ. ದಯವಿಟ್ಟು ಆ ಬಗ್ಗೆ ಹೇಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ಏಕೆಂದರೆ ಈ ಏಜೆನ್ಸಿಗಳನ್ನು ಫಿಕ್ಸ್ ಮಾಡಬೇಕಾದರೆ ನಮಗೆ ತಿಳಿದಿರುವಂಥ ಮಾಹಿತಿ ಪ್ರಕಾರ 30 ಹಾಸಿಗೆಗಳಿರುವಂಥದ್ದನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಬೇಕಾದರೆ ಅವರಿಗೆ ಮೊದಲು 100 ಹಾಸಿಗೆಗಳ ಆಸ್ಪತ್ರೆಯಲ್ಲಿ ಅಥವಾ 30 ಹಾಸಿಗೆಗಳ ಬೆಡ್‌ಗಳ ಆಸ್ಪತ್ರೆಯಲ್ಲಿ ಮಾಡಿದಂಥ ಅನುಭವ ಇರಬೇಕು ಎನ್ನುವಂಥ ಕಂಡೀಶನ್ ಇದೆ. ಈ ಕಂಡೀಶನ್‌ನಿಂದಾಗಿ ಇಡೀ ರಾಜ್ಯದಲ್ಲಿ 8 ರಿಂದ 10 ಏಜೆನ್ಸಿಗಳವರು ಮಾತ್ರ ಇದಕ್ಕೆ eligible ಆಗುತ್ತಿದ್ದಾರೆ ಮತ್ತು ಅವರು ದೂರದ ಊರಿನಲ್ಲಿದ್ದು ಬೇರೆ ಊರಿನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಈ ಟೆಂಡರ್‌ನ್ನು ಹಾಕುವುದರಿಂದ ಸರಿಯಾದ ರೀತಿಯಲ್ಲಿ, ಸಮರ್ಪಕವಾದ ರೀತಿಯಲ್ಲಿ ಕೆಲಸವಾಗುತ್ತಿಲ್ಲವೆನ್ನುವ ಒಂದು ಕೊರಗು ಇರುವುದರಿಂದ ಈ ಬಗ್ಗೆ ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಸುಮಾರು 13965 ಗ್ರೂಪ್ 'ಡಿ' ಹುದ್ದೆಗಳು ಮಂಜೂರಾಗಿದ್ದರೆ ಈ ಪೈಕಿ 9918 ಪೋಸ್ಟ್‌ಗಳು ಭರ್ತಿಯಾಗಿದೆ. 4047 ಹುದ್ದೆಗಳು ಖಾಲಿ ಇವೆ. ಸರ್ಕಾರದ ಪಾಲಿಸಿ ಪ್ರಕಾರ ಈಗ ಗ್ರೂಪ್ 'ಡಿ' ಹುದ್ದೆಗಳನ್ನು ನೇರ ನೇಮಕಾತಿ ಮಾಡುವುದಕ್ಕೆ ಬರುತ್ತಿಲ್ಲ. ಆದುದರಿಂದ ಈ ಹುದ್ದೆಗಳನ್ನು out source ನಲ್ಲಿ ಗುತ್ತಿಗೆದಾರರ ಮೂಲಕ ಅಲ್ಲಿದ್ದಂಥ ಜಿಲ್ಲಾಧಿಕಾರಿಗಳ ಮೂಲಕ ಇವರುಗಳನ್ನು ತೆಗೆದು ಕೊಳ್ಳಬಹುದೆಂದು ನಾವು ಈಗಾಗಲೇ ಸೂಚನೆಯನ್ನೂ ಸಹ ಕೊಟ್ಟಿದ್ದೇವೆ. ಸಾಕಷ್ಟು ಜಿಲ್ಲಾ ಆಸ್ಪತ್ರೆಗಳಲ್ಲಿ out sourcing ಮೂಲಕ ಟೆಂಡರ್‌ಗಳನ್ನು ಕರೆದು, ಅಂದರೆ ಅಲ್ಲಿ ಗ್ರೂಪ್ 'ಡಿ' ಹುದ್ದೆಗಳ ಸಂಖ್ಯೆ ಎಷ್ಟು

ಇದೆ ಎಂದು ನೋಡಿಕೊಂಡು ಟೆಂಡರ್ ಮೂಲಕ ಗುತ್ತಿಗೆದಾರನ್ನು ನೇಮಕ ಮಾಡಿ ಅವರಿಂದ ಈ ಹುದ್ದೆಗಳನ್ನು ತುಂಬಲು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಡಲಾಗಿರುತ್ತದೆ.

ಯಾವ ಗ್ರೂಪ್ 'ಡಿ' ಹುದ್ದೆಗಳು ಖಾಲಿ ಇರಲಾರದಂತೆ, ಜಿಲ್ಲಾಧಿಕಾರಿ ಹಾಗೂ ಡಿಹೆಚ್ಓ ಮೂಲಕ ಭರ್ತಿ ಮಾಡಿಕೊಳ್ಳಲು ಅವರಿಗೆ ಅವಕಾಶ ಮಾಡಿ ಕೊಡಲಾಗಿದೆ.

ಶ್ರೀ ಹೆಗಡೆ: ನಾನೇನು ಕೇಳುತ್ತಿದ್ದೇನೆಂದರೆ, ಯಾವ ಏಜೆನ್ಸಿಗಳನ್ನು ಫಿಕ್ಸ್ ಮಾಡುತ್ತಾರೆ, ಆ ಏಜೆನ್ಸಿ ಫಿಕ್ಸ್ ಮಾಡಲು ಇವರೇನು criteria ಇಟ್ಟಿದ್ದಾರೆ? 100 ಬೆಡ್‌ಗಳ ಆಸ್ಪತ್ರೆ ಏಜೆನ್ಸಿ ತೆಗೆದುಕೊಳ್ಳಬೇಕಾದರೆ, ಅವರಿಗೆ ಮೊದಲು 100 ಬೆಡ್ ಆಸ್ಪತ್ರೆಯಲ್ಲಿ ಕೆಲಸ ಮಾಡಿದಂಥ ಅನುಭವವನ್ನು ಕೇಳುತ್ತಿದ್ದಾರೆ. ಕೆಲವೊಂದು ಏಜೆನ್ಸಿಗಳು ಅದನ್ನು ದುರುಪಯೋಗಪಡಿಸಿಕೊಂಡು, ಕೆಲವೇ ಏಜೆನ್ಸಿಗಳು ಇಡೀ ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡುತ್ತಿರುವುದರಿಂದ, ಆ ಕಡಿಷನ್ ಅನ್ನು ಸ್ವಲ್ಪ ಸಡಿಲಗೊಳಿಸಲು ಮಾನ್ಯ ಸಚಿವರಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಸಚಿವರು ಜಿಲ್ಲಾಧಿಕಾರಿಗಳಿಗೆ ನೇಮಕ ಮಾಡಲು ಸಂಪೂರ್ಣವಾದ ಅಧಿಕಾರವನ್ನು ಕೊಡಲಾಗಿದೆ ಎಂದು ಹೇಳಿದರು, ಇವತ್ತು ಎಂಬಿಬಿಎಸ್ ಮಾಡಿದ ವೈದ್ಯರು ಸರ್ಕಾರ ಕಾಂಟ್ರಾಕ್ಟ್ ಬೇಸಿಸ್ ಏನು ಪೇಮೆಂಟ್ ಕೊಡುತ್ತದೆ, ಅದಕ್ಕೆ ಯಾರು ಬರುವುದಕ್ಕೆ ಸಿದ್ದರಿಲ್ಲ. ಇವತ್ತು ನಮ್ಮ ಹಿರೆಕೆರೂರು ತಾಲ್ಲೂಕಿನಲ್ಲಿ.

ಅಧ್ಯಕ್ಷರು: ಬಿ.ಸಿ. ಪಾಟೀಲರೆ, ಪ್ರಶ್ನೆ ಇರುವುದು ಆಸ್ಪತ್ರೆಗಳನ್ನು ಶುಚಿಗೊಳಿಸುವ ಬಗ್ಗೆ, ವೈದ್ಯರ ನೇಮಕಾತಿಯ ಬಗ್ಗೆ ಅಲ್ಲ, ನೀರು ಬೇರೆ ಕಡೆ ಹೋಗಬೇಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ ಮಾನ್ಯ ಸದಸ್ಯರು ಕೇಳುತ್ತಿರುವುದೇನೆಂದರೆ, ಆ ಸಮಸ್ಯೆ ಎಲ್ಲಾ ಕಡೆ ಇದೆ. ಇವರು ಯಾವೊದೋ ಕಾಲದಲ್ಲಿ ಫ್ರೀ ಕ್ವಾಲಿಫೀಕೇಷನ್ ಅನ್ನು ಫಿಕ್ಸ್ ಮಾಡಿದ್ದಾರೆ, ಬಹುಶಃ ಮಂತ್ರಿಗಳಿಗೂ ಗೊತ್ತಿದೆಯೋ ಇಲ್ಲವೋ. ರಾಜ್ಯದಲ್ಲೆಲ್ಲಾ ಆಸ್ಪತ್ರೆ ರಿಪೇರಿ, ಹೊಸ ಕಟ್ಟಡಗಳನ್ನು ರಿಪೇರಿ ಆ 4 ಜನ ಪುಣ್ಯಾತ್ಮರನ್ನು ಹುಡುಕಿಕೊಂಡು ಸಬ್ ಕಂಟ್ರಾಕ್ಟ್ ಎಲ್ಲಾ ಕಡೆ ಕೊಟ್ಟು ಬಿಡುತ್ತಾರೆ. ಶುಚಿಗೂ ಆ ಸಬ್ ಕಂಟ್ರಾಕ್ಟ್‌ಗಳನ್ನೇ ಇವರು ಹುಡುಕಿಕೊಳ್ಳಬೇಕು. ಅಲ್ಲಿ ನಮ್ಮ ಊರಿನವರು ಶುಚಿ ಮಾಡುವುದು, ಇವರು ಇಲ್ಲೆಲ್ಲೊ ಬೆಂಗಳೂರಿನಲ್ಲಿ ಕುಳಿತುಕೊಂಡಿರುತ್ತಾರೆ. ಬಹುಶಃ ಅದನ್ನು ಸ್ಟಡಿ ಮಾಡಿ,

ದಯಮಾಡಿ ಸಚಿವರೆ, ನಿಮ್ಮ ಗಮನಕ್ಕೂ ಬಂದಿದೆಯೊ ಇಲ್ಲವೋ. ಆ ಪ್ರೀ ಕ್ವಾಲಿಫಿಕೇಷನ್ ಅನ್ನು ಸಡಿಲ ಮಾಡಿ ಸ್ವಲ್ಪ ಲೋಕಲ್‌ನವರಿಗೂ ಕೂಡ ಕಂಟ್ರಾಕ್ಟ್ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಶುಚಿಗೊಳಿಸುವವರು ಊರಿನವರು, ಇವರು ಬೆಂಗಳೂರಿನಲ್ಲಿರುತ್ತಾರೆ, ಆ ತರಹದವರು 4-5 ಜನರಿದ್ದಾರೆ. ದಯಮಾಡಿ ಗಂಭೀರವಾದ ವಿಚಾರ, ಅದನ್ನು ಪರಿಶೀಲನೆ ಮಾಡಬೇಕು, ಪ್ಯಾಕೇಜ್ ಸಿಸ್ಟಂ ಮಾಡಿ ಬಿಡುತ್ತಾರೆ.

ಶ್ರೀ ವೈ.ಎನ್. ರುದ್ರೇಶ್ ಗೌಡ: ಆಸ್ಪತ್ರೆಗಳಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಆದರೆ ಆಸ್ಪತ್ರೆಯ ಒಳಗೆ ಹೋಗುವಂತಿಲ್ಲ, ಅಲ್ಲಿ ಸ್ವಚ್ಛತೆ ಏನೇನು ಇಲ್ಲ, ನಾವು ಪದೆ ಪದೇ ಹೇಳುತ್ತಿದ್ದೇವೆ, ಸ್ವಚ್ಚತೆ ಮಾಡಬೇಕು, ಆಸ್ಪತ್ರೆಯನ್ನು ಗುಡಿಸುವುದು, ಒರೆಸುವಂತಹದ್ದು ಆಗಬೇಕು. ಅಲ್ಲಿ ಹಳ್ಳೀಗಾಡಿನ ಜನರೆಲ್ಲಾ ಬಂದು ಎಲೆಅಡಿಕೆ ಹಾಕಿ ಉಗಿದು ಹೋಗಿರುತ್ತಾರೋ, ಅದು ಹಾಗೆಯೇ ಇರುತ್ತದೆ, ಆಸ್ಪತ್ರೆಗಳ ಒಳಗೆ ಹೋಗುವುದಕ್ಕೆ ನಮಗೂ ಸಹ ಬೇಜಾರಾಗುತ್ತದೆ.

ಶ್ರೀ ಎನ್.ಎಲ್. ನರೇಂದ್ರ ಬಾಬು: ಅವರು, ಶಾಸಕರ ಭವನದಲ್ಲಿ ತಮ್ಮ ನೇತೃತ್ವದಲ್ಲಿ ತುಂಬಾ ಚೆನ್ನಾಗಿ ಕ್ಲೀನ್ ಆಗುತ್ತಿದೆ, ಆ ರೀತಿ ಆಸ್ಪತ್ರೆಗಳು ಕ್ಲೀನ್ ಆಗಲಿ ಎಂದು ಹೇಳುತ್ತಿದ್ದಾರೆ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಇವತ್ತು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಇವತ್ತು ಸರ್ಕಾರಿ ಆಸ್ಪತ್ರೆಗಳನ್ನು ಶುಚಿಗೊಳಿಸಲು ಸರ್ಕಾರ ಬಹಳಷ್ಟು ಹಣವನ್ನು ಕೊಡುತ್ತಿದೆ. ಆದರೆ ಎಲ್ಲಾ ತಾಲ್ಲೂಕು, ಜಿಲ್ಲೆಯಲ್ಲಿರುವ ಪ್ರಶ್ನೆ ಏನೆಂದರೆ, ಈ ಹಣ ಅಲ್ಲಿ ಸರಿಯಾಗಿ ಉಪಯೋಗವಾಗುತ್ತಿಲ್ಲ, ದೊಡ್ಡ ಭ್ರಷ್ಟಾಚಾರ, ಅವ್ಯವಹಾರ ಅಲ್ಲಿ ನಡೆಯುತ್ತಿದೆ. ಯಾರಾದರೂ ಒಬ್ಬ ಮ್ಯಾನೇಜ್ ಮಾಡುತ್ತಾನೆ, ಅವನಿಂದ ಏಜೆನ್ಸಿಯನ್ನು ತೆಗೆದುಕೊಂಡು ಹೋಗುವುದು. ಇದರ ಬಗ್ಗೆ ನಿರ್ದಿಷ್ಟವಾದ ಮಾರ್ಗದರ್ಶನ ಮಾಡಿ, 500 ಜನ ಕಾಂಟ್ರಾಕ್ಟ್ ಎಂದು ಇದ್ದರೆ ಅಲ್ಲಿ ಕೇವಲ 100 ಜನ ಮಾತ್ರ ಕೆಲಸ ಮಾಡುತ್ತಿರುತ್ತಾರೆ. ಅದಕ್ಕೆ ಸರ್ಕಾರದವರು ಸೂಪರ್‌ವೈಸರ್ ಅನ್ನು ನೇಮಿಸಿ, ನೋಡಿಕೊಳ್ಳುವಂಥ ಕೆಲಸವನ್ನು ಮಾಡಬೇಕು.

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ, ಇದು ರಾಜ್ಯದ ಎಲ್ಲಾ ಕಡೆ ಇದೆ, ಯಾರ್ಯಾರೊ ಕಂಟ್ರಾಕ್ಟ್ ತೆಗೆದುಕೊಂಡು ಸಬ್ ಕಾಂಟ್ರಾಕ್ಟ್ ಕೊಡುತ್ತಾರೆ, ಅಲ್ಲಿ ಅವರು ಬಂದು ಸರಿಯಾಗಿ ಕೆಲಸ ಮಾಡುವಂಥ ಪರಿಸ್ಥಿತಿ ಇಲ್ಲ. ಅಲ್ಲಿ ಬೆಡ್ ಶೀಟ್ ತೊಳೆಯುವುದಿಲ್ಲ, ಪಿಲ್ಲೊಕವರ್ ತೊಳೆಯುವುದಿಲ್ಲ, ಅವರು ಯಾವುದೇ ರೂಂಗಳನ್ನು ಸ್ವಚ್ಚ ಮಾಡುವುದಿಲ್ಲ, ಸಬ್ ಕಂಟ್ರಾಕ್ಟ್ ಕೊಡುವುದರಿಂದ ಅಲ್ಲಿ

ಯಾವುದೇ ಕೆಲಸವಾಗುತ್ತಿಲ್ಲ. ಅದಕ್ಕಾಗಿ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಆ ಕ್ಷೇತ್ರದ ಸಂಬಂಧಿಸಿದ ಶಾಸಕರನ್ನು ಸೇರಿಸುವಂಥ ಕೆಲಸ ಮಾಡಬೇಕು, ಕಂಟ್ರಾಕ್ಟ್ ಅನ್ನು ಅಲ್ಲಿಯ ಲೋಕಲ್ ಅವರಿಗೆ ಕೊಟ್ಟರೆ ಅಲ್ಲಿ ಸ್ವಚ್ಚತೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲವಾದರೆ ಆಸ್ಪತ್ರೆಗಳಲ್ಲಿ ಒಳಗೆ ಹೋಗಲಾರದ ಪರಿಸ್ಥಿತಿ ಇದೆ.

ಶ್ರೀ ಬಿ. ಶ್ರೀರಾಮುಲು: Karnataka Transparency Act ಅನುಬಂಧ 1 ಮತ್ತು 2ರಲ್ಲಿ, ನಮ್ಮ ಎಲ್ಲಾ ಶಾಸಕರು ಹೇಳಿದಂತೆ ಸ್ವಚ್ಚತೆ ಬಹಳ ಮುಖ್ಯ. ಇವತ್ತು ಬಹಳಷ್ಟು ಶಾಸಕರು ಆಸ್ಪತ್ರೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಂಟ್ರಾಕ್ಟರ್ ಎಲ್ಲೊ ಇರುತ್ತಾರೆ, ಕಎಲಸ ಮಾಡುವವರು ಮಾತ್ರ ಸ್ಥಳೀಯರಿರುತ್ತಾರೆ, ಅವರಿಗೆ ಬಹಳ ಕಡಿಮೆ ಸಂಬಳವನ್ನು ಕೊಡುತ್ತಿರುತ್ತಾರೆ, ಅವರು ಸ್ವಚ್ಛತೆಯ ಕೆಲಸವನ್ನು ಎಷ್ಟು ಪ್ರಾಮಾಣಿಕವಾಗಿ ಮಾಡಬೇಕೋ ಅಷ್ಟು ಮಾಡುತ್ತಿರುತ್ತಾರೆ. ಕೆಲವು ಸಂದರ್ಭದಲ್ಲಿ ಕಂಟ್ರಾಕ್ಟಿನಲ್ಲಿ ಅವರು ತೆಗೆದುಕೊಳ್ಳುವ ಹಣ ಜಾಸ್ತಿ ಇದ್ದು, ಕೆಲಸಗಾರರಿಗೆ ಕೊಡುವುದು ಬಹಳ ಕಡಿಮೆ ಇರುತ್ತದೆ. ಮಾನ್ಯ ಶಾಸಕರೆಲ್ಲಾ ಸ್ವಚ್ಛತೆಯ ಬಗ್ಗೆ ಕ್ರಮ ತೆಗೆದುಕೊಳ್ಳ ಬೇಕೆನ್ನುವ ಮಾತನ್ನು ಈ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಸ್ವಚ್ಛತೆ ಇರಬಹುದು ಅಥವಾ ಈ ಕಾನೂನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಅಥವಾ ಸ್ವಚ್ಛತೆ ಇಲ್ಲದಿರುವ ಸಂದರ್ಭದಲ್ಲಿ ಅವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಂಡು ಅವರ ಕಂಟ್ರಾಕ್ಟ್ ಅನ್ನು ರದ್ದುಪಡಿಸಬೇಕು, ಅದನ್ನು ಮಾಡುವುದಕ್ಕೆ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಡಿಹೆಚ್ಒ ಗಳಿಗೆ ನಾನು ಆದೇಶವನ್ನು ನೀಡಿ, ಮುಂದಿನ ದಿವಸಗಳಲ್ಲಿ ಸ್ವಚ್ಛತೆ ಕಾಪಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಗಡೆ: ಆ ಪ್ರಿ ಕ್ವಾಲಿಫಿಕೇಷನ್ ಕಂಡಿಷನ್ ಅನ್ನು ಕಡಿಮೆ ಮಾಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರು, ನಿಮ್ಮ ಎಲ್ಲರ ಭಾವನೆಯನ್ನು ವಿಚಾರ ಮಾಡಿಕೊಂಡು ಅರ್ಥ ಮಾಡಿಕೊಂಡಿದ್ದಾರೆ, ಸುಧಾರಣೆಯನ್ನು ತನ್ನಿ.

ಶ್ರೀ ಸಿ.ಎಸ್. ಪುಟ್ಟೇಗೌಡ: ಅಧ್ಯಕ್ಷರೆ, ಪ್ರಿ ಕ್ವಾಲಿಫೀಕೇಷನ್ ನಿಯಮವಿದೆಯಲ್ಲಾ, ಅದನ್ನು ಸ್ವಲ್ಪ ಸಡಿಲ ಮಾಡಿದರೆ ಎಲ್ಲಾ ಸರಿ ಹೋಗುತ್ತದೆ.

ಅಧ್ಯಕ್ಷರು: ಓ.ಕೆ. ಮುಗಿಯಿತು.

ಶ್ರೀ ಎಸ್.ವಿ. ರಾಮಚಂದ್ರ (ಮಾನ್ಯ ಸದಸ್ಯರಾದ ಎ. ಮಂಜುರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ವೈದ್ಯಾಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಂದ ಹಿಂಪಡೆದಿರುವುದರಿಂದ, ಈಗ ವೈದ್ಯರು ಸಂಪೂರ್ಣವಾಗಿ ಕೆಲಸ ಮಾಡುತ್ತಿಲ್ಲ, ಆ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ನಮ್ಮ ಹಾಸನ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 116 ವೈದ್ಯರ ಹುದ್ದೆಗಳು ಮಂಜೂರಾಗಿತ್ತು. ಅದರಲ್ಲಿ 84 ವೈದ್ಯರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ, 32 ಹುದ್ದೆಗಳು ಖಾಲಿ ಇವೆ. ಇವತ್ತು 32 ಹುದ್ದೆಗಳೇನು ಖಾಲಿ ಇವೆ, 2008–09ನೇ ಸಾಲಿನಲ್ಲಿ 815 ವೈದ್ಯಾಧಿಕಾರಿಗಳನ್ನು ಕೆಪಿಎಸ್‌ಸಿ ಮೂಲಕ ಇವತ್ತು ನೇಮಕ ಮಾಡಲಾಗಿದೆ. ಆದಷ್ಟು ಬೇಗ ವೈದ್ಯರ ಕೊರತೆ ಏನಿದೆ, ಅವನ್ನು ತುಂಬಿ ಕೊಡಲಾಗುವುದು. ತಾವು ಇನ್ನೊಂದು ಸಮುದಾಯ ಆರೋಗ್ಯ ಕೇಂದ್ರವನ್ನು ಕೇಳಿದ್ದೀರಿ. 1 ಲಕ್ಷ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಕೊಡಬೇಕಾಗುತ್ತದೆ. ಈಗಾಗಲೇ ನಿಮ್ಮ ಜನಸಂಖ್ಯೆಗೆ ಅನುಗುಣವಾಗಿ 12 ಸಮುದಾಯ ಆರೋಗ್ಯ ಕೇಂದ್ರ ಕೊಡುವಲ್ಲಿ 20 ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೊಟ್ಟಿದ್ದೇವೆ, ಮತ್ತೊಂದು ಸಮುದಾಯ ಆರೋಗ್ಯ ಕೇಂದ್ರ ಕೊಡಲು ಅವಕಾಶವಿರುವುದಿಲ್ಲವೆಂದು, ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

ಶ್ರೀ ಎಸ್.ವಿ. ರಾಮಚಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಜಗಳೂರು ವಿಧಾನಸಭೆ ಕ್ಷೇತ್ರದಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿದ್ದಾರೆ, ಅಲ್ಲಿಗೆ ಮೂಲಭೂತವಾದ ಯಾವ ಸೌಲಭ್ಯವನ್ನು ಕೊಟ್ಟಿಲ್ಲ.

ಅಧ್ಯಕ್ಷರು: ರಾಮಚಂದ್ರರವರೆ, ನೀವು ಮಂಜುರವರ ಪ್ರಶ್ನೆಗೆ ಉತ್ತರವನ್ನು ಕೇಳುತ್ತಿದ್ದೀರಿ, ಇದು ನಿಮ್ಮ ಪ್ರಶ್ನೆಯಲ್ಲ, ನೀವು ಹಾಸನಕ್ಕೆ ಸಂಬಂಧಪಟ್ಟಂತೆ ಮಾತ್ರ ಕೇಳಿ, ನೀವು ಜಗಳೂರಿನ ಬಗ್ಗೆ ಕೇಳಿದರೆ, ಸಚಿವರಿಗೆ ಮಾಹಿತಿ ಎಲ್ಲಿ ಸಿಗಬೇಕು? ಏನಾದರು ಕೇಳುವುದಿದ್ದರೆ, ಹಾಸನದ ಬಗ್ಗೆ ಕೇಳಿ.

ಶ್ರೀ ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಏನೆಂದರೆ, ಇವರು ಹಿಂದಿನ ಸರ್ಕಾರದಲ್ಲಿ.

ಅಧ್ಯಕ್ಷರು: ಕೃಷ್ಣಮೂರ್ತಿಯವರೆ, ಇದು ಪ್ರಶ್ನೋತ್ತರ ಇಡೀ ರಾಜ್ಯದ್ದು ಕೇಳುವಂತಿಲ್ಲ, ನಾನು ಅಲೋ ಮಾಡಿಲ್ಲ, ಯಾವುದೂ ರೆಕಾರ್ಡ್‌ಗೆ

ಹೋಗುವುದಿಲ್ಲ, ನೀವು ಮಾತನಾಡುವುದಕ್ಕೆ ನಾನು ನಿಮಗೆ ಅಲೊ ಮಾಡಿಲ್ಲ, ಮೊದಲು ನನ್ನ ಪರ್ಮಿಷನ್ ಅನ್ನು ತೆಗೆದುಕೊಳ್ಳಿ, ಏನಾದರೂ ಇದ್ದರೆ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕೇಳಿ, ನಾನು ನಿಮಗೆ ಅಲೊ ಮಾಡುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): 15 ಪ್ರಶ್ನೆಗಳ ಪೈಕಿ, 8 ಪ್ರಶ್ನೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ್ದು, ಒಂದು ಪ್ರಶ್ನೆಗೆ ಉತ್ತರವನ್ನು ಆ ಕ್ಷೇತ್ರದ್ದನ್ನು ಕೇಳದೆ ಇಡೀ ರಾಜ್ಯದ್ದನ್ನು ಕೇಳಿದರೆ ಪ್ರಶ್ನೋತ್ತರ ಮುಗಿಯುವುದು ಹೇಗೆ?

(ಗೊಂದಲ)

ಅಧ್ಯಕ್ಷರು: ಕೃಷ್ಣಮೂರ್ತಿಯವರೆ, ನಾನು ಅಲೊ ಮಾಡಿಲ್ಲ, ರೆಕಾರ್ಡಿಗೆ ಹೋಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಕೃಷ್ಣಮೂರ್ತಿಯವರೇ, ನಾನು ನಿಮಗೆ ಅಲೋ ಮಾಡಲಿಲ್ಲ. ನೀವು ಹೇಳಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ. ನನ್ನ ಅನುಮತಿ ಇಲ್ಲದೆ ನೀವು ಮಾತನಾಡುತ್ತಿರುವುದು ಸರಿಯಲ್ಲ. ಹಾಸನ ಜಿಲ್ಲೆಗೆ ಸಂಬಂಧಪಟ್ಟ ಪ್ರಶ್ನೆ ಇದು. ಮಾನ್ಯ ಬಿ.ಸಿ. ಪಾಟೀಲರೆ ಬೇರೆ ಪ್ರಶ್ನೆ ಕೇಲಿ. ಗಮನ ಸೆಳೆಯುವ ಸೂಚನೆ ಕೊಡಿ ನಾನು ನಿಮಗೆ ಅಲೋ ಮಾಡುತ್ತೇನೆ. ಹಾಸನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿದ್ದಾರೆ. ಈ ರೀತಿ ಮಾಡಿದರೆ ನಾನು ಪ್ರಶ್ನೋತ್ತರ ಹೇಗೆ ನಡೆಸುವುದು? ಹಾಸನಕ್ಕೆ ಮಾತ್ರ ಸೀಮಿತವಾಗಿರುವ ಹಾಗೆ ಕೇಳಿ. ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಮಾನ್ಯ ರಾಮಚಂದ್ರರವರು ಮಂಜುರವರ ಪರವಾಗಿ ಪ್ರಶ್ನೆ ಕೇಳುತ್ತಿದ್ದಾರೆ. ಹಾಸನ ಜಿಲ್ಲೆ ಬಿಟ್ಟು ಜಗಳೂರು ತಾಲ್ಲೂಕಿನ ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಎಸ್.ವಿ. ರಾಮಚಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಹರಪ್ಪನಹಳ್ಳಿ ತಾಲ್ಲೂಕಿನ ಅರಸೀಕೆರೆಯಲ್ಲಿ ಮೊನ್ನೆ ತಾನೆ ಡೆಂಗ್ಯು ಜ್ವರದಿಂದ ಒಬ್ಬ ಸಾವನ್ನಪ್ಪಿದ್ದಾನೆ. ಡೆಂಗ್ಯು ಜ್ವರ ವ್ಯಾಪಕವಾಗಿ ಹಬ್ಬುತ್ತಿದೆ. ತಕ್ಷಣ ವಿದ್ಯುತ್ ರೂಪದಲ್ಲಿ ಅದಕ್ಕೆ ಪರಿಹಾರ ತೆಗೆದುಕೊಂಡರೆ, ಏನಾದರೂ ಸಮಸ್ಯೆ ಪರಿಹಾರವಾಗುತ್ತದೆ. ಇಲ್ಲದಿದ್ದರೆ ಜನಗಳು ಸತ್ತು ಹೋಗುತ್ತಾರೆ. ದಯಮಾಡಿ ಆರೋಗ್ಯ ಸಚಿವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಅಲ್ಲಿಗೆ ಸಮರ್ಪಕವಾದ ಔಷಧೋಪಚಾರಗಳನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಹಾಗೂ ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡಿದ್ದಾರೆ, ಅದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ಮಾನ್ಯ ಸಚಿವರು ತಾಲ್ಲೂಕುವಾರು ಮಾಹಿತಿ ಕೊಟ್ಟಿದ್ದಾರೆ. ಅದರಲ್ಲಿ 32 ಜನ ವೈದ್ಯರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಅದರ ಜೊತೆಯಲ್ಲಿ 22 ಸಮುದಾಯ ಆಸ್ಪತ್ರೆಗಳು ಇವೆ. ಅದಕ್ಕೆ ಕೆಲವು ಹುದ್ದೆಗಳು ಆಡಳಿತಾತ್ಮಕವಾಗಿ ಮಂಜೂರಾಗಬೇಕಾಗಿದೆ. ಅದನ್ನು ಯಾವಾಗ ಮಾಡಿಸಿ ಕೊಡುತ್ತೀರಿ ಎಂದು ಹೇಳಬೇಕು. 22 ಸಮುದಾಯ ಆಸ್ಪತ್ರೆಗಳಿಗೆ ಹುದ್ದೆಗಳು ಮಂಜೂರಾಗಬೇಕು. ಡಾಕ್ಟರ್‌ಗಳು ಇರಬಹುದು, ಸಂಬಂಧಪಟ್ಟ ಸಿಬ್ಬಂದಿ ಇರಬಹುದು, ಅದನ್ನು ಯಾವಾಗ ಮಂಜೂರಾತಿ ಮಾಡಿ ಕೊಡುತ್ತಾರೆ, ಉದಾಹರಣೆಗೆ ನಮ್ಮ ಸ್ವಂತ ಊರಿನಲ್ಲಿ ಡಾಕ್ಟರ್‌ಗಳು ಇಲ್ಲ. ದಯಮಾಡಿ ಕೂಡಲೇ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಡಬೇಕು.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣರವರು ಮೊನ್ನೆ ಒಂದು ಪ್ರಶ್ನೆ ಕೇಳಿ ನಮ್ಮ ಕ್ಷೇತ್ರದಲ್ಲಿ ಡಾಕ್ಟರ್‌ಗಳು ಇಲ್ಲವೆಂದು ಹೇಳಿದ್ದರು. ತಕ್ಷಣ ಅವರ ಕ್ಷೇತ್ರಕ್ಕೆ ಒಬ್ಬ ಡಾಕ್ಟರ್‌ರನ್ನು ಹಾಕಿ ಕೊಟ್ಟಿದ್ದೇನೆ

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಕದಿರೆಹಳ್ಳಿ ಎಂದು ಒಂದು ವಿಲೇಜ್ ಇದೆ. ಅಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಬ್ಬ ಡಾಕ್ಟರ್ ಹಾಕಿ ಕೊಡಿ ಎಂದು ಕೇಳಿದ್ದೆ. ಹಾಕಿಕೊಟ್ಟಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಎಲ್ಲಾ ಆಸ್ಪತ್ರೆಗಳನ್ನೂ ಡಾಕ್ಟರ್‌ಗಳನ್ನೂ ಹಾಸನಕ್ಕೆ ತೆಗೆದುಕೊಂಡು ಹೋದರು.

ಗೊಂದಲ

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಬಚ್ಚೇಗೌಡರೆ, ನಾನು ನಿಮಗೆ ಪ್ರಶ್ನೆ ಕೇಳಲಿಲ್ಲ. ನೀವು ಕಾರ್ಮಿಕ ಸಚಿವರಾಗಿ ಉತ್ತರ ಕೊಡಿ. ಸರಿಯಾಗಿ ಮಾತನಾಡುವುದು ಕಲಿತುಕೊಳ್ಳಿ.

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಪ್ರಶ್ನೋತ್ತರವನ್ನು ಮುಕ್ತಾಯ ಮಾಡುತ್ತೇನೆ. ಬಚ್ಚೇಗೌಡರೇ ದಯವಿಟ್ಟು ಕುಳಿತುಕೊಳ್ಳಿ. please sit down.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ದಯಮಾಡಿ ಸಚಿವರಿಗೆ ಸರಿಯಾಗಿ ಮಾತನಾಡುವುದು ಕಲಿಯುವುದಕ್ಕೆ ಹೇಳಿ.

ಅಧ್ಯಕ್ಷರು: ಪ್ರಶ್ನೋತ್ತರ ಸಮಯದಲ್ಲಿ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ ಯಾರೂ ದಯವಿಟ್ಟು ಮಧ್ಯಪ್ರವೇಶ ಮಾಡಬೇಡಿ. ಮಾನ್ಯ ರೇವಣ್ಣರವರೇ ಪ್ರಶ್ನೆ ಕೇಳಿ. .ಬಚ್ಚೇಗೌಡರೇ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವೇಕೆ intervene ಮಾಡುತ್ತೀರಿ? ನೀವು ಸುಮ್ಮನೆ ಕುಳಿತುಕೊಳ್ಳಿ. ನೀವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ತಮ್ಮ ಮುಖೇನ ನಾನು ಕೇಳುವುದು ಇಷ್ಟೆ. ತಮ್ಮ ಮುಖೇನ ನಾನು ನನ್ನ ಸ್ವಂತ ಕ್ಷೇತ್ರದಲ್ಲಿ ಡಾಕ್ಟರ್‌ಗಳು ಇಲ್ಲವೆಂದರೆ, ಮಂತ್ರಿಗಳು ಅವರ ಇಲಾಖೆ ಬಗ್ಗೆ ಪ್ರಶ್ನೆ ಬಂದಾಗ ಉತ್ತರ ಕೊಡುವಂತೆ ಹೇಳಿ. ಆರೋಗ್ಯ ಸಚಿವರ ಉತ್ತರವನ್ನೂ ಅವರೇ ಹೇಳುತ್ತಾರೆಂದರೆ ನನ್ನದೇನೂ ಅಭ್ಯಂತರವಿಲ್ಲ. ಎಲ್ಲಾ ಹಾಸನ ಜಿಲ್ಲೆಗೆ ತೆಗೆದುಕೊಂಡು ಹೋಗಿದ್ದಾರೆಂದರೆ ಬೇಕಾದರೆ ಅದರ ಬಗ್ಗೆ ಚರ್ಚೆ ಮಾಡೋಣ, ಯಾವ ಯಾವ ಜಿಲ್ಲೆಯಲ್ಲಿ ಏನೇನು ಇದೆ ಅದನ್ನು ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ದಯಮಾಡಿ ಮಾನ್ಯ ಆರೋಗ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣರವರು ಕೇಳಿದಂತಹ ಪ್ರಶ್ನೆಗೆ ಹಾಸನ ಜಿಲ್ಲೆಯಲ್ಲಿ ಒಂದು ಲಕ್ಷ 20 ಜನಸಂಖ್ಯೆ ಆಧಾರದ ಮೇಲೆ ಒಂದು ಸಮುದಾಯ ಆರೋಗ್ಯ ಕೇಂದ್ರ ಕೊಡಬೇಕಾಗಿತ್ತು. 12 ಸಮುದಾಯ ಆರೋಗ್ಯ ಕೇಂದ್ರ ಇರಬೇಕಾಗಿತ್ತು. 22 ಸಮುದಾಯ ಆರೋಗ್ಯ ಕೇಂದ್ರಗಳು ಇವೆ. ಈ ರಾಜ್ಯದಲ್ಲಿ ಒಟ್ಟಾರೆ 1208 ಮಂದಿ ವೈದ್ಯರ ಕೊರತೆ ಇದೆ, ಹಾಸನ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಮೂಲಕ ತಜ್ಞ ವೈದ್ಯರನ್ನು ತೆಗೆದುಕೊಳ್ಳಬೇಕಾದರೆ NRHM ಅಡಿಯಲ್ಲಿ 25,000 ದಿಂದ 50,000 ರೂ. ಒಳಗಡೆ ಅವರಿಗೆ ಗೌರವಧನ ಕೊಡಬಹುದು. ಅದಕ್ಕೋಸ್ಕರ ತೆಗೆದುಕೊಳ್ಳುವುದಾದರೆ ಜಿಲ್ಲಾಧಿಕಾರಿಗಳ ಮೂಲಕ ತೆಗೆದುಕೊಳ್ಳಿ. ಮೊನ್ನೆ 815 ಜನ ಡಾಕ್ಟರ್‌ಗಳಲ್ಲಿ 630 ಜನ ಡಾಕ್ಟರ್ಸ್ ಈ ಕೆಲಸಕ್ಕೆ ಭರ್ತಿ ಆಗಿದ್ದಾರೆ. ಇನ್ನೂ ಕೆಲವು ಡಾಕ್ಟರ್‌ಗಳು ಭರ್ತಿ ಆಗಿಲ್ಲ. ಹಂತ ಹಂತವಾಗಿ ಏನು ಡಾಕ್ಟರ್‌ಗಳ ಕೊರತೆ ಇದೆ, ಅದನ್ನು ಪ್ರಾಮಾಣಿಕವಾಗಿ ಭರಿಸಿ ಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.